**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 04.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ತೋರಿಸಿರುವ ನನ್ನ ವಿಳಾಸ ಸರಿಯಾಗಿ ಇದೆ. ಪ್ರತಿವಾದಿ ನಂ.1 ನನಗೆ ಮಾವ ಆಗಬೇಕು. ನನ್ನ ಮದುವೆ 2017 ರಲ್ಲಿ ಆಗಿರುತ್ತದೆ. ಮದುವೆಯ ನಂತರ ನಾನು, ನನ್ನ ಅತ್ತೆ ಹಾಗೂ ಮೈದುನ ಒಂದೇ ಮನೆಯಲ್ಲಿ ವಾಸವಿದ್ದೇವು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ಮಾವ ಪ್ರತಿವಾದಿ ನಂ.1 ನಮ್ಮ ಮನೆತನದ ಹಿರೆತನ ಮಾಡುತ್ತಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ಗಂಡ ಹೊಲ ಮನೆ ಕೆಲಸ ಮಾಡುತ್ತಿದ್ದರು. ನಿಮ್ಮ ಗಂಡನಿಗೆ ಓದು ಬರೆಯಲು ಬರುತ್ತದೆ ಎಂದರೆ ಸಾಕ್ಷಿ ಅಷ್ಟಕ್ಕಷ್ಟೇ ಬರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ಹೊಲ ಮನೆ ಕೆಲಸ ಮಾಡುತ್ತಿದ್ದರು. ಪ್ರತಿವಾದಿ ನಂ.1 ರವರಿಗೆ ಹೊಲ ಮನೆ ಕೆಲಸದಿಂದ ಪ್ರತಿತಿಂಗಳು 10 ಸಾವಿರ ಆದಾಯ ಬರುತ್ತಿತ್ತಾ ಎಂದರೆ ಸಾಕ್ಷಿ ಎಲ್ಲ ಖರ್ಚು ತೆಗೆದು 6 ತಿಂಗಳಿಗೆ ಒಂದು ಲಕ್ಷ ಉಳಿಯುತ್ತಿತ್ತು ಎಂದು ನುಡಿಯುತ್ತಾರೆ. ನನ್ನ ಮಾವ ಲಕೆಗಳಲ್ಲಿ ವ್ಯವಹಾರ ಮಾಡುತ್ತಿದ್ದರಾ ಎಂದರೆ ಸಾಕ್ಷಿ ನನಗೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮೊದಲು 14 ಎಕರೆ ಇತ್ತು ಎಂದರೆ ಸರಿ. 14 ಎಕರೆಯಲ್ಲಿ 4 ಎಕರೆ ಜಮೀನನ್ನು ಶಿವಪ್ಪ ಕಲ್ಲಪ್ಪ ಅವಟಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ

ನಮ್ಮ ಮನೆಯವರು ಹೇಳಿದ್ದರು ಎಂದು ನುಡಿಯುತ್ತಾರೆ. ಸದರಿ  ಶಿವಪ್ಪ ಕಲ್ಲಪ್ಪ ಅವಟಿ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಿಮ್ಮ ಗಂಡ ಜೀವಂತವಿರುವಾಗ ಪ್ರತಿವಾದಿ ನಂ.2 ನಿಮ್ಮ ಗಂಡನಿಗೆ ಮೋಸ ಮಾಡಿ ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾರೆಂದು ಹೇಳಿ ಪಿರ್ಯಾದಿ ಸಲ್ಲಿಸಿದ್ದರಾ ಎಂದರೆ ಸಾಕ್ಷಿ ನನಗೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಕರಾರುಪತ್ರಕ್ಕೆ ನಿಮ್ಮ ಗಂಡ ಒಪ್ಪಿಗೆ ಸಾಕ್ಷಿಯೆಂದು ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಅವರು ಮೋಸ ಮಾಡಿ ಮಾಡಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲುಃ  2 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು  ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**